4 ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು (ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸೇಷನ್ಸ್ ಕೇಸ್ ನಂಃ 239/2022
ಫ್ರಾಸಾಃ 1
ಆ ಸಾಃ 1

ಸಾಕ್ಷಿಯ ಹೆಸರುಃ ಬಾಳಪ್ಪ ಅಲಿಯಾಸ್ ಬಾಳೇಶ ಚೆನ್ನಪ್ಪ ಸುಣಗಾರ

ತಂದೆಯ ಹೆಸರುಃ ಚೆನ್ನಪ್ಪ

ವಯಸ್ಸುಃ 30 ವರ್ಷ

ಉದ್ಯೋಗಃ ಕೂಲಿ

ವಾಸ್ತವ್ಯಃ ಎಂ.ಕೆ.ಹುಬ್ಬಳ್ಳಿ

ದಿನಾಂಕಃ **27-04-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಈ ಕೇಸಿನಲ್ಲಿ ಪೊಲೀಸರಿಗೆ ನನ್ನ ಮೊಬೈಲ್ ಕಳ್ಳತನವಾಗಿದೆ ಎಂದು ಹೇಳಿಕೆ ದೂರು ಕೊಟ್ಟಿದ್ದೆನು. ನಾನು ನಮ್ಮೂರಾದ ಎಂ.ಕೆ.ಹುಬ್ಬಳ್ಳಿಯಲ್ಲಿ ಬ್ರಿಡ್ಜ್ ಹತ್ತಿರ ಪ್ರೇರಣಾ ಸ್ಕೂಲ್ ಕಡೆಗೆ ಸಂಡಾಸಗೆ ಕುಂತಾಗ ಮೊಬೈಲ್ ಫೋನ್ ಕಳ್ಳತನ ಆಯಿತು. ಅಲ್ಲಿಗೆ ನಾನು ಸಂಡಾಸಗೆ ಕುಳಿತಿದ್ದಾಗ ಅಲ್ಲಿಗೆ ಮೋಟರ ಸೈಕಲ್ ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ನನ್ನ ಕೈಯಲ್ಲಿದ್ದ ಮೊಬೈಲ್ ಫೋನನ್ನು ಕಸಿದುಕೊಂಡು ಅಲ್ಲಿಂದ ಹೋದರು. ಈ

ರೀತಿ ಇಬ್ಬರು ಬಂದು ನನ್ನ ಮೊಬೈಲ್ ಫೋನನ್ನು ಕಸಿದುಕೊಂಡು ಹೋದಾಗ ರಾತ್ರಿ 9-30 ಗಂಟೆಯಾಗಿತ್ತು. ಅಲ್ಲಿ ಬಂದ ಇಬ್ಬರು ವ್ಯಕ್ತಿಗಳು ಯಾವ ಮೋಟರ ಸೈಕಲ್ ನಲ್ಲಿ ಬಂದರು ಎಂದು ನನಗೆ ಹೇಳಲು ಆಗುವುದಿಲ್ಲ, ಕಾರಣ ಅಲ್ಲಿ ಬೆಳಕು ಇಲ್ಲದೇ ಇದ್ದುದರಿಂದ ನನಗೆ ಅವರು ಯಾರೆಂದು ಗೊತ್ತಿಲ್ಲ. ನಾನು ವಾಪಸ್ಸು ಮನೆಗೆ ಹೋಗುವಾಗ ಚಾಸಾ-2 ನಾಗೇಶ ಗೋಣಿ ಮತ್ತು ಚಾಸಾ-6 ಸುರೇಶ ಪೂಜಾರ ಇವರಿಗೆ ನನ್ನ ಮೊಬೈಲ್ ಫೋನನ್ನು ಯಾರೋ ಇಬ್ಬರು ಕಸಿದುಕೊಂಡು ಹೋದರು ಎಂದು ಹೇಳಿದ್ದೆನು. ನನ್ನ ಮೊಬೈಲ್ ಫೋನನ್ನು ಯಾರೋ ಇಬ್ಬರು ಕಸಿದುಕೊಂಡ ಹೋದ ದಿನವೇ ನಾನು ರಾತ್ರಿ ಪೊಲೀಸ್ ಠಾಣೆಗೆ ಹೋಗಿ ನನ್ನ ಮೊಬೈಲ್ ಫೋನನ್ನು ಯಾರೋ ಕಳ್ಳತನ ಮಾಡಿ ಹೋಗಿದ್ದಾರೆ ಎಂದು ಹೇಳಿ ದೂರು ಕೊಟ್ಟೆನು. ಪೊಲೀಸರು ನನ್ನ ದೂರಿನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ, ಅವರು ಸಹಿ ಮಾಡು ಎಂದು ಹೇಳಿದ ಕಾರಣ ನಾನು ಸಹಿ ಮಾಡಿದೆನು. ಸಾಕ್ಷಿಗೆ ದೂರನ್ನು ತೋರಿಸಿ ಅದರಲ್ಲಿರುವ ಸಹಿಯನ್ನು ತೋರಿಸಿದಾಗ ಸಾಕ್ಷಿಯು ದೂರಿನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ಫೋನ್ ರಿಯಲ್ ಮಿ ಮೋಬೈಲ್ ಫೋನ್ ಆಗಿತ್ತು. ನನಗೆ ಈಗ ತೋರಿಸಿದ ರಿಯಲ್ ಮಿ ಮೊಬೈಲ್ ಫೋನ್ ನನ್ನದೇ. ಸಾಕ್ಷಿಯು ಆ ಮೊಬೈಲ್ ಫೋನನ್ನು ಗುರುತಿಸಿದ್ದು ಅದನ್ನು ಮುಮಾ-1 ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ಫೋನನ್ನು ಯಾರು ಕಳ್ಳತನ ಮಾಡಿಕೊಂಡು ಹೋಗಿದ್ದು ಎಂದು ನನಗೆ ಇಲ್ಲಿಯವರೆಗೂ

ಗೊತ್ತಿರುವುದಿಲ್ಲ. ಪೊಲೀಸರಿಗೆ ನಾನು ನನ್ನ ಮೊಬೈಲ್ ಕಳ್ಳತನವಾದ ಜಾಗವನ್ನು ತೋರಿಸಿದ್ದೆನು. ಆಗ ಪೊಲೀಸರು ಅಲ್ಲಿ ಫೋಟೋ ತೆಗೆದಿದ್ದರು. ಅದೇ ಸ್ಥಳದಲ್ಲಿ ಪೊಲೀಸರು ಪಂಚನಾಮೆಗೆ ನನ್ನ ಸಹಿ ಪಡೆದರು, ಪಂಚನಾಮೆಯನ್ನು ನಾನು ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದ ಫೋಟೋಗಳನ್ನು ನಾನು ಗುರುತಿಸಿದ್ದು ಅವುಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು. ನನ್ನ ಮೊಬೈಲ್ ಫೋನ್ ಸಿಕ್ಕಿತೋ ಇಲ್ಲವೋ ಎಂದು ನಾನು ಪೊಲೀಸ್ ಠಾಣೆಗೆ ಹೋಗಿ ಚೌಕಾಶಿ ಮಾಡಿರುವುದಿಲ್ಲ. ನನಗೆ ನ್ಯಾಯಾಲಯದ ಮುಂದೆ ಇದ್ದ ಆರೋಪಿತರು ಯಾರು ಎಂದು ಗೊತ್ತಿಲ್ಲ. ನನಗೆ ಈಗ ತೋರಿಸಿದ ಆರೋಪಿ ನಂ. 1 ಮತ್ತು 3 ಯಾರೆಂದು ಗೊತ್ತಿರುವುದಿಲ್ಲ. ನನಗೆ ಈಗ ತೋರಿಸಿದ ಸಹಿ ನನ್ನದೇ, ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದು ಪೊಲೀಸ್ ಬಾಂಡನ್ನು ನಿಪಿ-5 ಎಂದು ಗುರುತಿಸಲಾಯಿತು, ನಿಪಿ-5(ಎ) ನನ್ನ ಸಹಿ.

( ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಪೊಲೀಸ್ ಠಾಣೆಗೆ ಹೋದಾಗ ನೀವು ಹೇಳಿದಂತೆ ನಿಪಿ-1 ದೂರು ಪಡೆದುಕೊಂಡರು ಎಂದರೆ ಸಾಕ್ಷಿಯು ಪೊಲೀಸರು ಆ ರೀತಿ ತಯಾರಿಸಿದ ದಾಖಲೆಗೆ ಸಹಿ ಹಾಕು ಎಂದು ಹೇಳಿದ ಕಾರಣ ನಾನು ಸಹಿ ಹಾಕಿದೆ ಎನ್ನುತ್ತಾರೆ. ದಿನಾಂಕ 11-03-2020 ರಂದು ರಾತ್ರಿ 9-45 ಗಂಟೆಗೆ ನಾನು ಸಂಡಾಸ ಮಾಡಿ ಮನೆ ಕಡೆಗೆ ಹೋಗುತ್ತಿದ್ದೆನು ಎಂದರೆ ನಿಜ. ನಾನು ಆ ರೀತಿ ಮನೆ ಕಡೆಗೆ ಹೋಗುತ್ತಿದ್ದಾಗ ಮೋಟರ ಸೈಕಲ್ ನಲ್ಲಿ ಬಂದ ಇಬ್ಬರು ಮೋಟರ ಸೈಕಲ್ ನ್ನು ನಿಲ್ಲಿಸಿ ಮೋಟರ ಸೈಕಲ್ ನ ಪೆಟ್ರೋಲ್ ಮುಗಿದಿದೆ ಪೆಟ್ರೋಲ್ ತರಲು ಡಬ್ಬಿ ಇದ್ದರೆ ಕೊಡಿ ಎಂದು ನನ್ನನ್ನು ಕೇಳಿದರು ಎಂದರೆ ಸರಿಯಲ್ಲ. ಆಗ ನಾನು ಆ ಇಬ್ಬರಿಗೆ ನನ್ನ ಹತ್ತಿರ ಡಬ್ಬಿ ಇಲ್ಲ, ಇಲ್ಲೇ ಮುಂದೆ ಪೆಟ್ರೋಲ್ ಪಂಪ್ ಇದೆ ಅಲ್ಲಿ ಹೋಗಿರಿ ಎಂದು ಹೇಳಿದೆ ಎಂದರೆ ಸರಿಯಲ್ಲ. ಆಗ ಇಬ್ಬರು ವ್ಯಕ್ತಿಗಳು ನನ್ನ ಕಣ್ಣಿಗೆ ಖಾರದ ಪುಡಿ ಗೊಜ್ಜಿದರು ಎಂದರೆ ಸರಿಯಲ್ಲ. ಆಗ ನಾನು ಕೈಯಿಂದ ಕಣ್ಣನು ಉಜ್ಜುತ್ತಾ ಬೇರೆ ಕಡೆ ತಿರುಗಿದಾಗ ಅಲ್ಲಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಂಗಿಯ ಏದೆಯ ಮೇಲಿನ ಕಿಸೆಗೆ ಕೈಹಾಕಿದನು ಎಂದರೆ ಸರಿಯಲ್ಲ. ಆಗ ನಾನು ನನ್ನ ಏಡಗೈಯಿಂದ ಕಿಸೆ ಹಿಡಿದುಕೊಂಡೆನೆಂದರೆ ಸರಿಯಲ್ಲ, ಆಗ ಇಬ್ಬರು ಕೈತೆಗೆಯದಿದ್ದರೇ ನಿನ್ನನ್ನು ಖಲಾಸ್ ಮಾಡುತ್ತೇನೆ ಎಂದು ನನಗೆ ಜೀವ ಬೆದರಿಕೆ ಹಕಿದರು ಎಂದರೆ ಸರಿಯಲ್ಲ. ನಾನು ಅವರಲ್ಲಿ ಹೇಳುವಷ್ಟರಲ್ಲಿ ನನ್ನ ಕಿಸೆಯಲ್ಲಿದ್ದ ಮೊಬೈಲ್ ಹ್ಯಾಂಡಸೆಟ್ ನ್ನು ಆ ವ್ಯಕ್ತಿ ಕಿತ್ತು ಮೋಟರ ಸೈಕಲ್ ನಲ್ಲಿ ಇಬ್ಬರೂ ಇಟಗಿ ಕ್ರಾಸ್ ಕಡೆಗೆ ಹೋದರು ಎಂದರೆ ಸರಿಯಲ್ಲ. ಆಗ ನಾನು ಚಿರಾಡಿದಾಗ ಅಲ್ಲಿ

ದಾರಿಯಿಂದ ಹೊಲಕ್ಕೆ ಹೋಗುತ್ತಿದ್ದ ನಮ್ಮೂರ ನಾಗೇಶ ಭೀಮಪ್ಪ ಗೋಣಿ ಈತನು ಬಂದು ನನ್ನನ್ನು ವಿಚಾರಿಸಿದಾಗ ನಾನು ಆತನಿಗೆ ಆರೋಪಿತರು ಈ ರೀತಿ ನನಗೆ ಜೀವ ಬೆದರಿಕೆ ಹಾಕಿ ಮೊಬೈಲ್ ಫೋನನ್ನು ಕಿತ್ತುಕೊಂಡು ಹೋದ ಬಗ್ಗೆ ಹೇಳಿದೆನು ಎಂದರೆ ಸರಿಯಲ್ಲ. ಇಬ್ಬರು ವ್ಯಕ್ತಿಗಳು ಜಬರದಸ್ತಿಯಿಂದ ನನ್ನ ನೀಲಿ ಬಣ್ಣದ 7000 ರೂಪಾಯಿಯ ಕಿಮ್ಮತ್ತಿನ ಮೊಬೈಲ್ ಹ್ಯಾಂಡಸೆಟ್ ನ್ನು ಕಿತ್ತುಕೊಂಡು ಹೋದರು ಎಂದು ನಾನು ನಾಗೇಶ ಈತನಿಗೆ ಹೇಳಿದೆನು ಎಂದರೆ ಸರಿಯಲ್ಲ. ಮೋಟರ ಸೈಕಲ್ ಹಿರೋ ಹೊಂಡಾ ಸ್ಪಂಡರ್ ಪ್ಲಸ್ ಕೆಎ-25, ಇಎಕ್ಸ-3523 ಎಂದು ಎಂದು ಹೇಳಿದೆನು ಎಂದರೆ ಸರಿಯಲ್ಲ. ನನ್ನ ಮೊಬೈಲ್ ನ್ನು ಜಬರದಸ್ತಿಯಿಂದ ಕಿತ್ತುಕೊಂಡ ಹೋದ ವ್ಯಕ್ತಿಗಳ ವಯಸ್ಸು 20 ರಿಂದ 25 ಇತ್ತು ಎಂದು ಅದರಲ್ಲಿ ಒಬ್ಬನು ಮೈಮೇಲೆ ಕೆಂಪು ಹಳದಿ ನಮೂನೆಯ ಶರ್ಟು ಹಾಗೂ ಕಪ್ಪು ನಮೂನೆಯ ಪ್ಯಾಂಟು ಮತ್ತು ಮತ್ತೊಬ್ಬನು ಕೆಂಪು ಶರ್ಟು ಹಾಗೂ ಕಪ್ಪು ನಮೂನೆಯ ಪ್ಯಾಂಟ್ ಧರಿಸಿದ್ದನೆಂದು ಅವರು ಮೈಯಿಂದ ಸಡಪಾತಾಳ ಗೋದಿ ಕೆಂಪು ಬಣ್ಣದವರಿರುತ್ತಾರೆ ಎಂದು ಚಹರೆಯನ್ನು ಹೇಳಿದೆನು ಎಂದರೆ ಸರಿಯಲ್ಲ. ಬೇರೆ ವಾಹನಗಳು ಸಂಚರಿಸುವಾಗ ಆ ವಾಹನದ ಹೆಡ್ ಲೈಟ್ ಬೆಳಕಿನಿಂದ ನಾನು ಮೋಟರ ಸೈಕಲ್ ನಂಬರನ್ನು ನಾನು ನೋಡಿರುತ್ತೇನೆ ಎಂದು ನಾನು ಪೊಲೀಸರಿಗೆ ಕೊಟ್ಟ ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬರೆಯಲು ಬರುವುದಿಲ್ಲವೆಂದು ನಾನು ಹೇಳಿ ಪೊಲೀಸರಿಗೆ ದೂರು ಕೊಟ್ಟೆನೆಂದರೆ ನಿಜ. ನೀವು 5 ದಿನ ಆದ ನಂತರ ದಿನಾಂಕ 16-03-2020 ರಂದು ಪೊಲೀಸರಿಗೆ ದೂರು ಕೊಟ್ಟಿದ್ದಿರಿ ಎಂದರೆ ಸಾಕ್ಷಿಯು ದೂರು

ಯಾವಾಗ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1 ದೂರನ್ನು ನಾನೇ ಹೇಳಿ ಬರೆಸಿದಾಗ ಪೊಲೀಸರು ಅದನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದು ನನಗೆ ಓದಿ ಹೇಳಿದ ನಂತರ ನಾನು ನಿಪಿ-1(ಎ) ಸಹಿ ಹಾಕಿದೆನು ಎಂದರೆ ಸರಿಯಲ್ಲ. ನೀವು ಯಾವುದಾದರೂ ದಾಖಲೆಗೆ ಸಹಿ ಹಾಕಬೇಕಾದರೇ ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ಸಹಿ ಹಾಕುತ್ತೀರಿ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ , ಯಾರಾದರೂ ಸಹಿ ಹಾಕುವಾಗ ಓದಿ ಹೇಳಿದರೇ ಮಾತ್ರ ನನಗೆ ಗೊತ್ತಾಗುತ್ತದೆ ಎನ್ನುತ್ತಾರೆ. ದಿನಾಂಕ 17-03-2020 ರಂದು ಪೊಲೀಸರು ಪಂಚನಾಮೆಗೆಂದು ಇಬ್ಬರು ಪಂಚರನ್ನು ಕರೆಸಿದಾಗ ನಾನೇ ಪೊಲೀಸರಿಗೆ ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನಿಪಿ-2 ರಂತೆ ಪಂಚನಾಮೆ ಮಾಡಿದರು ಎಂದರೆ ನಿಜ. ನಾನು ಆ ಸಮಯದಲ್ಲಿ ಪೊಲೀಸರಿಗೆ ಆರೋಪಿತರು ನನಗೆ ಖಾರದ ಪುಡಿ ಗೊಜ್ಜಿ ನನ್ನ ಮೊಬೈಲ್ ಫೋನನ್ನು ಜೇಬಿನಿಂದ ಕಸಿದುಕೊಂಡು ಹೋದ ಬಗ್ಗೆ ಹೇಳಿದೆನು ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದಿನಾಂಕ 17-03-2020 ರಂದು ಹೇಳಿಕೆ ಕೊಟ್ಟೆನೆಂದರೆ ಸರಿಯಲ್ಲ, ಆ ಹೇಳಿಕೆಯಲ್ಲಿ ಚಾಸಾ-2 ಮತ್ತು 6 ರವರಿಗೆ ಈ ಘಟನೆಯ ಬಗ್ಗೆ ನಾನು ವಿಷಯ ತಿಳಿಸಿದೆನು ಎಂದು ಹೇಳಿದೆನು ಎಂದರೆ ಸರಿಯಲ್ಲ. ಚಾಸಾ-6 ರವರು ನನ್ನ ಮೊಬೈಲ್ ಫೋನನ್ನು ಕಸಿದುಕೊಂಡವರಲ್ಲದೇ ಇನ್ನೂ 3 ಜನ ಅಂಡರಪಾಸ್ ಬ್ರಿಡ್ಜ ಹತ್ತಿರ ಕಾಯುತ್ತಾ ನಿಂತಿದ್ದಾಗಿ ಹೇಳಿದರು ಎಂದರೆ ಸರಿಯಲ್ಲ. ನಾನು ದಿನಾಂಕ 17-03-2020 ರಂದು ನನಗೆ ಈಗ ಓದಿ ಹೇಳಿದಂತೆ ಕಿತ್ತೂರ ಆರಕ್ಷಕರ ನಿರೀಕ್ಷಕರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ

ಎಂದರೆ ಸರಿಯಲ್ಲ. ಸಾಕ್ಷಿಗೆ ಅವರು ಕೊಟ್ಟರೆನ್ನಲಾದ ಹೇಳಿಕೆಯನ್ನು ಓದಿ ಹೇಳಿದಾಗ ಸಾಕ್ಷಿಯು ಅದನ್ನು ನಿರಾಕರಿಸಿರುತ್ತಾರೆ, ಆ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ದಿನಾಂಕ 21-03-2020 ರಂದು ನನಗೆ ಕಿತ್ತೂರ ಆರಕ್ಷಕ ವೃತ್ತ ನಿರೀಕ್ಷಕರು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಆ ದಿನ ನನಗೆ ಕಿತ್ತೂರಿನ ಆರಕ್ಷಕ ವೃತ್ತ ನಿರೀಕ್ಷಕರು ಆರೋಪಿತರು ನನ್ನ ಮೊಬೈಲ್ ಫೋನನ್ನು ಕಸಿದುಕೊಂಡ ದಿನ ಧರಿಸಿದ ಬಟ್ಟೆಗಳನ್ನು ಹಾಗೂ ಆರೋಪಿತರು ಕೃತ್ಯಕ್ಕೆ ಬಳಸಿದ ಮೋಟರ ಸೈಕಲ್ ನ್ನು ತೋರಿಸಿದರು ಎಂದರೆ ಸರಿಯಲ್ಲ. ನನ್ನ ಬಳಿಗೆ ಆರೋಪಿತರು ದರೋಡೆ ಮಾಡಲೆಂದು ತಂದ ಮೋಟರ ಸೈಕಲ್ ನ್ನು ನಾನು ಗುರುತಿಸಿದ್ದೆನು ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಾನು ಈಗ ತಾವು ತೋರಿಸಿದ ಪ್ಲಾಸ್ಟಿಕ್ ಪ್ಯಾಕೇಟ್ ದಲ್ಲಿದ್ದ ಪ್ಯಾಕ್ ಮಾಡಿದ ಮೊಬೈಲ್ ಹ್ಯಾಂಡ್ ಸೆಟ್ - - - - - - - - - - - - -- ಸನಾಉಲ್ಲಾ ಹೋಳಿ ಇವರಿಗೆ ನೋಡಿದರೇ ಗುರುತಿಸುತ್ತೇನೆ ಎಂದು ನಿಪಿ-7 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಪೊಲೀಸ್ ಠಾಣೆಯಲ್ಲಿ ಇದ್ದ ಆರೋಪಿತರಾದ 1 ಮತ್ತು 3 ರವರನ್ನು ನಾನು ಗುರುತಿಸಿ ಅವರೇ ಮೋಟರ ಸೈಕಲ್ ನಲ್ಲಿ ಬಂದು ನನಗೆ ಬೆದರಿಸಿ ನನ್ನ ಮೊಬೈಲ್ ಫೋನನ್ನು ಕಸಿದುಕೊಂಡು ಹೋಗಿದ್ದು ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನೇ ಪೊಲೀಸರಿಗೆ ನಿಪಿ-1 ರಂತೆ ದೂರನ್ನು ಬರೆಸಿದ್ದರೂ ಸಹ ನಾನು ದೂರು ಬರೆಸಿಲ್ಲವೆಂದು ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡಲೆಂದು ಅವರ

ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ವಕೀಲರಿಂದಃ

ಅಲ್ಲಿ ಜಾಗದಲ್ಲಿ ನಿಂತುಕೊಳ್ಳಿ ಎಂದು ಪೊಲೀಸರು ನನಗೆ ಹೇಳಿದ ರೀತಿಯಲ್ಲಿ ನಿಂತುಕೊಂಡಾಗ ನಿಪಿ-3 ಮತ್ತು 4 ರಂತೆ ಫೋಟೋ ತೆಗೆದರು ಎಂದರೆ ನಿಜ. ನಾನು ಪ್ರೇರಣಾ ಶಾಲೆಯ ಕಡೆಗೆ ಸಂಡಾಸಗೆ ಹೋಗಿದ್ದೆನೆಂದು ಅಲ್ಲಿ ಸಂಡಾಸಗೆ ಕುಳಿತಿದ್ದಾಗ ಮೋಟರ ಸೈಕಲ್ ನಲ್ಲಿ ಬಂದ ಯಾರೋ ಇಬ್ಬರು ನನ್ನ ಬಳಿ ಬಂದು ನನ್ನ ಕೈಯಲ್ಲಿದ್ದ ನನ್ನ ಮೊಬೈಲ್ ಫೋನನ್ನು ಕಳ್ಳತನ ಮಾಡಿಕೊಂಡು ಹೋದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಈ ಕೇಸಿಗೆ ಅನುಕೂಲವಾಗಲೀ ಎಂದು ಪೊಲೀಸರು ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದಿದ್ದಾರೆ ಎಂದರೆ ನಿಜ. ನನ್ನ ಮೊಬೈಲ್ ಫೋನನ್ನು ಯಾರು ತೆಗೆದುಕೊಂಡು ಹೋದರು ಎಂದು ನನಗೆ ಇವತ್ತಿನವರೆಗೆ ಗೊತ್ತಿಲ್ಲ ಎಂದರೆ ನಿಜ. ನನಗೆ ಯಾವತ್ತೂ ಪೊಲೀಸರು ನ್ಯಾಯಾಲಯದ ಮುಂದೆ ಇದ್ದ ಆರೋಪಿತರನ್ನು ತೋರಿಸಿಲ್ಲ ಎಂದರೆ ನಿಜ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

**4** ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು **(**ಪಿಸಿಎ**)** ಬೆಳಗಾವಿ.